ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪ್ರತ್ಯೇಕ ಜೇಷ್ಟತಾ ಪಟ್ಟಿಯನ್ನು ತಯಾರು ಮಾಡಿರುವುದಿಲ್ಲ

ಈ) ಈ ಭಾರತ ಸರ್ವೋನ್ನತ ನ್ಯಾಯಾಲಯವು ಅರ್ಜಿ ಸಂ 61/2002ರಲ್ಲಿ ಅಂತಿಮ ತೀರ್ಪು ನೀಡಿದ ನಂತರ ಇಂಜಿನಿಯರ್ ವೃಂದಗಳ ಅಂತಿಮ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸಿ ಅರ್ಹರಾದ ಪರಿಶಿಷ್ಟ ಜಾತಿ ಪರಿಶಿಷ್ಟ ವಂಗಡದವರಿಗೆ ಬಡ್ತಿ ನೀಡಲಾಗುವುದು

853(406) ಶ್ರೀಮತಿ ಭಾಗೀರಥಿ ಟಿ (ಕೊಟ್ಟೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೂಡ್ಲಗಿ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ರಸ್ತೆಗಳು ಎಷ್ಟು, ಹಾಗೂ ಆ ರಸ್ತೆಗಳ ಪೈಕಿ ಎಷ್ಟು ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ,

ಆ) ಈ ರಸ್ತೆಗಳ ಸುಧಾರಣೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು,

ಇ) 2006–07ನೇ ಸಾಲಿನಲ್ಲಿ ಈ ರಸ್ತೆಗಳಿಗಾಗಿ ಬಿಡುಗಡೆ ಮಾಡಿದ ಅನುದಾನವೆಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೂಡ್ಲಗಿ ತಾಲ್ಲೂಕಿನ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ 3 ರಾಜ್ಯ ಹೆದ್ದಾರಿಗಳು ಹಾಗೂ 15 ಜಿಲ್ಲಾ ಮುಖ್ಯ ರಸ್ತೆಗಳಿರುತ್ತವೆ ಇವುಗಳ ಪೈಕಿ ಯಾವುದೇ ರಸ್ತೆಗಳನ್ನು ಮೇಲ್ದರ್ಜೆಗೇರಿಸಿರುವುದಿಲ್ಲ

ಆ) ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆಯನ್ನು ಮತ್ತು ರಾಜ್ಯ ಹೆದ್ದಾರಿಗಳ ನಿರ್ವಹಣೆ ಅಭಿವೃದ್ಧಿಯನ್ನು ಕೆ ಆರ್ ಡಿ ಸಿ ಎಲ್ ವತಿಯಿಂದ ಕೈಗೆತ್ತಿ ಕೊಳ್ಳಲಾಗಿದೆ

ಇ) ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆಗಾಗಿ ಲೆಕ್ಕ ಶೀರ್ಷಿಕೆ 5054ರ ಅಡಿಯಲ್ಲಿ ರೂ 16 19 ಲಕ್ಷಗಳು ಹಾಗೂ 3054 ಅಡಿಯಲ್ಲಿ ರೂ 123 69 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ

854(1087) ಶ್ರೀಮತಿ ಭಾಗೀರಥಿ ಟಿ (ಕೊಟ್ಟೂರು) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಗ್ಯಲಕ್ಷ್ಮೀ ಯೋಜನೆ ಯಾವಾಗಿನಿಂದ ಜಾರಿಗೆ ಬಂದಿದೆ,

ಆ) ಈ ಯೋಜನೆಯಡಿ ರಾಜ್ಯಾದ್ಯಂತ ಗುರುತಿಸಲ್ಪಟ್ಟಿರುವ ಫಲಾನುಭವಿಗಳ ಸಂಖ್ಯೆ ಎಷ್ಟು

ಇ) ಈ ಯೋಜನೆಗಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನವೆಷ್ಟು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ದಿನಾಂಕ 17–10–2006ರ ಆದೇಶದಲ್ಲಿ ಸೂಚಿಸಿರುವ ಮಾರ್ಗ ಸೂಚಿಗಳನ್ವಯ ರಾಜ್ಯದಲ್ಲಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಫಲಾನುಭವಿಗಳನ್ನು ಗುರುತಿಸಲಾಗುತ್ತದೆ

ಆ) 31–3–2006ರ ನಂತರ ಹುಟ್ಟಿದ ಅರ್ಹ ಹೆಣ್ಣು ಮಗುವನ್ನು ಹುಟ್ಟಿದ ಒಂದು ವರ್ಷದೊಳಗೆ ಈ ಯೋಜನೆಯಡಿಯಲ್ಲಿ ದಾಖಲಿಸಬಹುದಾಗಿದೆ ದಿನಾಂಕ 31–12–2006ರವರೆಗೆ 1,11,313 ಫಲಾನುಭವಿಗಳನ್ನು ಗುರುತಿಸಲಾಗಿದೆ ಸರ್ಕಾರವು ಈ ಯೋಜನೆಗೆ 2006–07 ಮತ್ತು 2007–08ನೇ ಸಾಲಿಗೆ ಅನ್ವಯಿಸಿ ಅನುಮೋದನೆ ನೀಡಿದೆ

ಇ) ಈ ಯೋಜನೆಯಡಿ ಸಿಗುವ ಸೌಲಭ್ಯವನ್ನು ದಿನಾಂಕ 17–10–2006ರ ಆದೇಶದಲ್ಲಿ ವಿವರಿಸಿದೆ ಇದರಲ್ಲಿ ಮಗುವಿಗೆ ವೈದ್ಯಕೀಯ ಸೌಲಭ್ಯ ವಿದ್ಯಾಭ್ಯಾಸದ ಸಮಯದಲ್ಲಿ ವಿದ್ಯಾರ್ಥಿ ವೇತನಗಳೂ ಸಹ ಒಳಗೊಂಡಿದೆ ಹುಡುಗಿಗೆ 18 ವರ್ಷ ತುಂಬಿನ ನಂತರ ಯೋಜನೆಯ ಮುಕ್ತಾಯದ ಅವಧಿಯಲ್ಲಿ ಕೆಲವೊಂದು ಷರತ್ತುಗಳನ್ನು ಪೂರೈಸಿದ್ದಲ್ಲಿ ಅಂದರೆ ಅವಳು ಒಂದನೇ ತರಗತಿಯಿಂದ ಎಂಟನೇ ತರಗತಿವರೆಗೆ ಪಾಸಾಗಿದ್ದಲ್ಲಿ ಮತ್ತು ಅವಿವಾಹಿತಳಾಗಿದ್ದರೆ ಮಾತ್ರ ಅಂತಿಮ ಮೊತ್ತವನ್ನು ನೀಡಲಾಗುವುದು

ಸರ್ಕಾರವು ಮಗುವಿನ ಹೆಸರನ್ನು ದಾಖಲಿಸುವುದರಿಂದ ಹಿಡಿದು ಮಧ್ಯಂತರ ನಂದಾಯಗಳೂ ಸೇರಿದಂತೆ, ಅವಧಿ ಮುಗಿದ ನಂತರ ಅಂತಿಮ ಮೊತ್ತವನ್ನು ಪಾವತಿಸುವವರೆಗೆ, ಮಗುವಿನ ಜಾಡನ್ನು ಹಿಡಿಯಲು ವೆಬ್ ಆಧಾರಿತ ಕಂಪ್ಯೂಟರೀಕೃತ ಆಡಳಿತಾತ್ಮಕ ಯಾಂತ್ರಿಕ ಕೌಶಲ್ಯವನ್ನು ಅಳವಡಿಸಬಲ್ಲಂತಹ, ಹಣಕಾಸು ಸಂಸ್ಥೆಯನ್ನು ಆಯ್ಕೆ ಮಾಡಲು ಕ್ರಮ ವಹಿಸಲಾಗುತ್ತಿದೆ ಪಾಲುದಾರ ಹಣಕಾಸು ಸಂಸ್ಥೆಯು ಹೆಣ್ಣು ಮಗುವಿನ ಹೆಸರಿನಲ್ಲಿ ಇಟ್ಟ ರೂ 10,000 ಗಳ ಠೇವಣಿಯನ್ನು ಹಿಂದಕ್ಕೆ ನೀಡುವಾಗ

ಅವಳ ಪರವಾಗಿ ಗರಿಷ್ಠಗೊಳಿಸಬೇಕಾಗುತ್ತದೆ ಹಣಕಾಸು ಸಂಸ್ಥೆಯ ಆಯ್ಕೆ ಪ್ರಕ್ರಿಯೆಯು ಜಾರಿಯಲ್ಲಿದ್ದು ಆದಷ್ಟು ಬೇಗನೆ ಅಂತಿಮಗೊಳಿಸಲಾಗುವುದು ಈ ಸಾಲಿನ ಆಯವ್ಯಯದಲ್ಲಿ ರೂ 234 00 ಕೋಟಿಯನ್ನು ಮೀಸಲಿಡಲಾಗಿದೆ

855(1153) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ್ (ಗುಲ್ಬರ್ಗಾ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಮಹಾನಗರದಲ್ಲಿ ನಗರ ಸಂಚಾರಿ ಬಸ್ ನಿಲ್ದಾಣ ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ,

ಆ) ಹಾಗಿದ್ದಲ್ಲಿ, ಯಾವ ಸ್ಥಳವನ್ನು ಆಯ್ಕೆ ಮಾಡಲಾಗಿರುತ್ತದೆ,

ಇ) ಇದನ್ನು ಯಾವಾಗ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ, ಇದಕ್ಕಾಗಿ ಹಣ ಮಂಜೂರು ಮಾಡಲಾಗಿದೆಯೇ ಮಂಜೂರು ಹಣ ಎಷ್ಟು?

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಹೌದು

ಆ) ಈ ಕೆಳಕಂಡ ಸ್ಥಳಗಳನ್ನು ಆಯ್ಕೆ ಮಾಡಲಾಗಿದೆ

1) ಗುಲ್ಬರ್ಗಾ ನಗರದ ಸೂಪರ್‌ಮಾರ್ಕೆಟ್

2) ಗುಲ್ಬರ್ಗಾ ನಗರದ ಸರ್ದಾರ್ ವಲ್ಲಭಬಾಯಿ ಪಟೇಲ್ ಬಡಾವಣೆ (ಬಡೆಪೂರು)

ಇ) 1) 2006–07ನೇ ಸಾಲಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ಈ ಕೆಲಸಕ್ಕೆ ರೂ 25 00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ

2) ಗುಲ್ಬರ್ಗಾ ನಗರದ ಸರ್ದಾರ್ ವಲ್ಲಭಬಾಯಿ ಪಟೇಲ್ ಬಡಾವಣೆಯ ಕಾಮಗಾರಿಗೆ ರೂ 25 00 ಲಕ್ಷ ಮಂಜೂರು ಮಾಡಲಾಗಿರುತ್ತದೆ

856(1154) ಶ್ರೀ ಚಂದ್ರಶೇಖರ ಪಾಟೀಲ್ ರೇವೂರ (ಗುಲ್ಬರ್ಗಾ) (ನಗರಾಭಿವೃದ್ಧಿ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ನಗರದ ಶರಣಬಸವೇಶ್ವರ ಕೆರೆಯ ಅಭಿವೃದ್ಧಿ ಯಾವ ಹಂತದಲ್ಲಿದೆ,